(ಶ್ರೀ ಎಸ್. ಎಂ. ಕೃಷ್ಣ)

ದಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರಕ್ಕೆ ತೀವ್ರವಾದ ಕಳಕಳಿ ಇದೆ. ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕೋಟ್ಯಾಂತರ ರೂಪಾಯಿ ಆಲೂಗಡ್ಡೆಯನ್ನು ಬೆಳೆಯುತ್ತಾರೆ. ಆದ್ದರಿಂದ ಆ ಪ್ರದೇಶಗಳಲ್ಲಿ ಈ ಆಲೂಗಡ್ಡೆ ಬೆಳೆಗೆ ತೀವ್ರವಾದ ತೊಂದರೆಯಾಗಿದೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಧಿಕಾರಿಗಳು ಮಾಡಿರುವ ಅಂದಾಜಿನ ಪ್ರಕಾರ ಸೇಕಡಾ ೩೫ ರಷ್ಟು ಎಂದರೆ ಸುಮಾರು ೨೦-೨೫ ಲಕ್ಷ ರೂಪಾಯಿಗಳಷ್ಟು ನಷ್ಟ ಆಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ

ಶ್ರೀ ಎಚ್. ಡಿ. ದೇವೇಗೌಡ.—ಈ ಆಲೂಗಡ್ಡೆಯ ವಿಚಾರದಲ್ಲಿ ನಾನು ಒಂದು ವಿಷಯವನ್ನು ಹೇಳುತ್ತೇನೆ. ದೋಷರಹಿತ ಬೀಜವನ್ನು ಒದಗಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ವೇನೆಂದರೆ ಕೇಂದ್ರದ ವ್ಯವಸಾಯ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ಕೂಡ ಸಿಲೋನ್‌ನಿಂದ ದೋಷರಹಿತ ಬಿತ್ತನೆ ಬೀಜವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಆರೋಪಣೆಯನ್ನು ನಾನು ಮಾಡಿದರೆ ಮಾನ್ಯ ಮಂತ್ರಿಗಳು ಅನ್ಯಥಾ ಭಾವನೆ ಮಾಡಬಾರದು. ಇದರ ಹಿಂದೆ ಹಿತಾಸಕ್ತಿಗಳ ಕೈವಾಡ ಇದೆ. ಆದ್ದರಿಂದ ಈಗ ಸುಮಾರು ೨೦ ವರ್ಷಗಳಿಂದ ನಮ್ಮ ರಾಜ್ಯಕ್ಕೆ ದೋಷರಹಿತ ಆಲೂಗಡ್ಡೆ ಬಿತ್ತನೆ ಬೀಜವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿ ಆಲೂಗಡ್ಡೆ ಬೆಳೆ ನಷ್ಟವಾಗುವುದಕ್ಕೆ ಮೂಲ ಕಾರಣ ದೋಷರಹಿತ ಬಿತ್ತನೆ ಬೀಜ ದೊರಕದೆ ಇರುವುದು. ಇದನ್ನು ಸರಿಪಡಿಸುವ ಪರಿಸ್ಥಿತಿದೆಯೇ ಹೇಗೆ ? ಇಲ್ಲದೇ ಹೋದರೆ ಆಲೂಗಡ್ಡೆಯನ್ನು ಹಾಕುವುದನ್ನು ಕೈಬಿಡಬೇಕು ಎಂದು ರೈತರಿಗೆ ಹೇಳುವುದು ಒಳ್ಳೆಯದು.

ಶ್ರೀ ಎಸ್. ಎಂ. ಕೃಷ್ಣ.— ಈಗ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತಹ ವಿಚಾರವನ್ನು ಸರ್ಕಾರದವರು ಗಮನಿಸುತ್ತಾರೆ. ದೋಷರಹಿತ ಬೀಜವನ್ನು ಸರಬರಾಜು ಮಾಡುವುದಕ್ಕೆ ಸಂಬಂದ ಪಟ್ಟವರೊಡನೆ ವ್ಯವಹಾರ ಮಾಡುತ್ತೇವೆ. ವ್ಯವಸಾಯ ಇಲಾಖೆಯ ಮಾನ ಮಂತ್ರಿಗಳಾದ ಶ್ರೀ ಕೆ. ಎಚ್. ಪಾಟೀಲರು ಈಗ ಆಲೂಗಡ್ಡೆ ಬೆಳೆ ನಷ್ಟವಾಗಿರತಕ್ಕ ಭಾಗದಿಂದ ಬಂದಿರತಕ್ಕ ಸದಸ್ಯರೊಡನೆ ಸಮಾಲೋಚನೆ ಮಾಡಿ ಆ ಬಗ್ಗೆ ಏನು ಸುಧಾರಣೆ ಮಾಡಬೇಕು ಎಂಬುದನ್ನು ಕುಳಿತುಕೊಂಡು ಚರ್ಚೆ ಮಾಡಿ ನಂತರ ಕ್ರಮ ತೆಗೆದುಕೊಳ್ಳುತ್ತಾರೆ.

Arrest and Release of a Member.—Announcement

MADAM SPEAKER.—I have received a communication dated 17th August 1972 from the Superintendent of Police, Bangalore District, stating that Sri Konandur Lingappa, Hon'ble Member of this House who was arrested on 15th August 1972 was convicted and sentenced to imprisonment by the I Class Magistrate, Ramanagaram, till the raising of the Court on 16th August 1972 and the that he was released on 16th August 1972 at 5-30 P.M.

Relase of a forest lands for Agricutural purposes

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ ಈಗ ತಾವು ಏನು ಹೇಳಿದಿರಿ ಈ ಸಂಬಂಧದಲ್ಲಿ ನಾನು ಎರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈಗ ಅರಣ್ಯ ಮಂತ್ರಿಗಳು ಇನ್ನು ಹೇಳುತ್ತಾರೆ ಎಂದರೆ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡುವದಿಲ್ಲ ಎಂದು ಹೇಳುತ್ತಾರೆ.

ಅಧ್ಯಕ್ಷರು.—ಇವೊತ್ತು ಇಲ್ಲಿ ಈಗ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ :

ಶ್ರೀ ಕೋಣಂದೂರು ಲಿಂಗಪ್ಪ —ಕಂದಾಯ ಮಂತ್ರಿಗಳು ಇದ್ದಾರೆ ಅವರೇ ಸಾಕು. ಈಗ ಅರಣ್ಯ ಶಾಖೆಯ ಮಂತ್ರಿಗಳು ಏನು ಹೇಳುತ್ತಾರೆ ಎಂದರೆ ಬೇಸಾಯಕ್ಕೆ ಯೋಗ್ಯವಾದ ಅರಣ್ಯ ಭೂಮಿಯನ್ನು

ಬಿಡುಗಡೆ ಮಾಡುವುದಿಲ್ಲ ಎಂದು ಹೇಳುತ್ತಾರೆ. ಮಲೆನಾಡಿನಲ್ಲಿ ಅರಣ್ಯ ಭೂಮಿಯನ್ನು ಕೇಳುವವರೇ ಇಲ್ಲ. ಮಲೆನಾಡಿನಲ್ಲಾಗಲೀ ಅಥವಾ ಬೇರೆ ಕಡೆಯಲ್ಲಾಗಲೀ ಬೇಸಾಯಕ್ಕೆ ಯೋಗ್ಯವಾದ ಕಾಡು ಇಲ್ಲದೆ ಇರುವ ಜಮೀನನ್ನು ವ್ಯವಸಾಯಕ್ಕೆ ಭೂಮಿ ಇಲ್ಲದೇ ಇರುವವರಿಗೆ ಕೊಡಿ ಎಂದು ನಮ್ಮ ಸೋಷಲಿಸ್ಟ್ ಪಾರ್ಟಿ ಹುಟ್ಟಿದ ಲಾಗಾಯಿತು ಆರ್ಜಿ ಕೊಡುತ್ತಾ ಬಂದಿದೆ. ಭೂ ರಹಿತ ಗೇಣಿದಾರರಿಗೆ ಭೂಮಿಯನ್ನು ಕೊಡಿ ಎಂದು ನಾವು ಹೇಳುತ್ತಾ ಬಂದಿದ್ದೇವೆ. ರಾಮನಗರ ತಾಲ್ಲೂಕು ಹಂದಿಗುಂಡಿ ಅರಣ್ಯ ಪ್ರದೇಶದಲ್ಲಿ ಸುಮಾರು ೫ ಸಾವಿರ ಎಕರೆ ಜಮೀನು ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇದೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೆಲವು ಕಡೆ ಅರಣ್ಯ ಭೂಮಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇದೆ. ಈ ಪ್ರದೇಶವನ್ನು ಭೂಹೀನ ರೈತರಿಗೆ ಹಂಚಬೇಕು ಎಂದು ನಾವು ಮೊನ್ನೆ ದಿವಸ ಚಳುವಳಿ ಮಾಡಿದಾಗ... .....

ಅಧ್ಯಕ್ಷರು.—ಇದನ್ನೆಲ್ಲಾ ಹೇಳಬೇಕಾದರೆ ನೋಟೀಸ್ ಕೊಟ್ಟು ಹೇಳಬೇಕು.

ಶ್ರೀ ಕೋಣಂ ನೂರು ಲಿಂಗಪ್ಪ.—ಇವೊತ್ತು ನೋಟೀಸು ಕೊಡುತ್ತೇವೆ. ಭೂಹೀನ ರೈತರಿಗೆ, ಗೇಣಿದಾರರಿಗೆ ಬೇಸಾಯಕ್ಕೆ ಯೋಗ್ಯವಾದ ಅರಣ್ಯ ಭೂಮಿಯನ್ನು ಕೊಡಬೇಕು ಎಂದು ನಮ್ಮ ಸೋಷಲಿಸ್ಟ್ ಪಾರ್ಟಿಯವರು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇನೆ. ಮಾನ್ಯ ಮಂತ್ರಿಗಳು ಆ ಅರಣ್ಯ ಪ್ರದೇಶಕ್ಕೆ ಯಾವಾಗ ಬೇಕಾದರೂ ಬಂದು ನೋಡಿ. ಅಲ್ಲಿ ಕಾಡು ಇಲ್ಲ. ಅದು ಬೇಸಾಯಕ್ಕೆ ಯೋಗ್ಯವಾಗಿದೆ. ಅಂಥಾ ಜಮೀನನ್ನು ಭೂಹೀನ ರೈತರಿಗೆ ಕೊಡಿ ನಮ್ಮ ಮಲೆನಾಡಿನಲ್ಲಿಯೂ ಕೂಡ ಬೇಸಾಯಕ್ಕೆ ಯೋಗ್ಯವಾದ ಅರಣ್ಯ ಭೂಮಿ ಇದೆ. ಅದನ್ನೂ ಸಹ ಸರ್ಕಾರದವರು ಪರಿಶೀಲನೆ ಮಾಡಿ ಭೂಹೀನ ರೈತರಿಗೆ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

Hunger strike by the Students of the Veterinary College in Bangalore

ಶ್ರೀ ವಾಟಾಳ್ ನಾಗರಾಜ್.—ವಿಧಾನ ಸೌಧದ ಮುಂಭಾಗದಲ್ಲಿ ವೆಟರ್‌ನರಿ ಕಾಲೇಜಿನ ವಿದ್ಯಾರ್ಥಿಗಳು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಈಗ ಇಲ್ಲಿ ಪಶುಸಂಗೋಪನಾ ಶಾಖೆಯ ಮಂತ್ರಿಗಳಿಲ್ಲ ಇದ್ದಾರೆ. ಆ ಬಗ್ಗೆ ಅವರು ಒಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಅದು ನಿನ್ನೆಯೇ ಮುಗಿದಿದೆ.

ಶ್ರೀ ವಾಟಾಳ್ ನಾಗರಾಜ್.—ಅದು ಇನ್ನೂ ಇತ್ಯರ್ಥವಾಗಿಲ್ಲ. ಅವರು ೪ ದಿವಸಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದನ್ನು ಬಗೆಹರಿಸದಿದ್ದರೆ ತೀವ್ರವಾದ ಕೆಟ್ಟ ಪರಿಣಾಮ ಉಂಟಾಗುತ್ತದೆ. ಪರಿಸ್ಥಿತಿ ಇನ್ನೂ ಉಲ್ಬಣವಾಗುತ್ತದೆ. ಈಗಾಗಲೇ ೪-೫ ಜನ ವಿದ್ಯಾರ್ಥಿಗಳ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿದೆ. ಆದ್ದರಿಂದ ಇದನ್ನು ಬಗೆಹರಿಸದಿದ್ದರೆ ಇನ್ನಷ್ಟು ಕೆಟ್ಟ ಪರಿಣಾಮವಾಗುತ್ತದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಸ್ಪಷ್ಟವಾದ ನಿಲುವನ್ನು ಹೇಳಬೇಕು.

ಅಧ್ಯಕ್ಷರು.—ಅದನ್ನು ನಿನ್ನೆಯ ದಿವಸವೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಮಾನ್ಯ ಮಂತ್ರಿಗಳು ಏನು ಈ ವಿಚಾರದಲ್ಲಿ ಹೇಳಿಕೆ ಕೊಟ್ಟಿದ್ದಾರೆ ಇದರಿಂದ ನಮಗಿಂತ ಆ ವೆಟರ್‌ನರಿ ಕಾಲೇಜ್ ವಿದ್ಯಾರ್ಥಿಗಳಿಗೆ ಸಮಜಾಯಿಷಿಯಾಗಿಲ್ಲ. ಆ ವಿದ್ಯಾರ್ಥಿಗಳು ಇನ್ನೂ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಹೋರಾಟ ಮಾಡುತ್ತಿದ್ದಾರೆ. ಈ ರೀತಿ ಆದರೆ ಇದು ಯಾವ ರೀತಿ ಮುಕ್ತಾಯವಾಗಬೇಕು. ಅವರು ಏತಕ್ಕೆ ಉಪವಾಸ ಮಾಡುತ್ತಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಈ ಬಗ್ಗೆ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಈಗಾಗಲೇ ಕೆಲವರ ಪರಿಸ್ಥಿತಿ ಚಿಂತಾಜನಕವಾಗಿದೆ ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಿ ಉಪವಾಸ ಮಾಡುತ್ತಿರುವ ವೆಟರ್‌ನರಿ ವಿದ್ಯಾರ್ಥಿಗಳನ್ನು ಕರೆಸಿ ಮಾತನಾಡಿ ಅದನ್ನು ಇತ್ಯರ್ಥ ಮಾಡಿದರೆ ಒಳ್ಳೆಯದು. ಅಥವಾ ಮಾನ್ಯ ಮಂತ್ರಿಗಳೇ ಆ ವಿದ್ಯಾರ್ಥಿಗಳು ಉಪವಾಸ ಸತ್ಯಾಗ್ರಹ ಮಾಡುವ ಸ್ಥಳಕ್ಕೆ ಹೋಗಿ ನೋಡಿಕೊಂಡು ವಿದ್ಯಾರ್ಥಿಗಳನ್ನು ಮಾತನಾಡಿಸಿಕೊಂಡು ಬಂದರೆ ಒಳ್ಳೆಯದು.